**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 1243/2021**

ಹೆಸರುಃ ಬಿ.ಎಸ್ ರೂಪ್ಲಿಬಾಯಿ ಸಿ.ಡಬ್ಲ್ಯೂಃ 20

ವಯಸ್ಸುಃ 49 ಪಿ.ಡಬ್ಲ್ಯೂಃ 7

ಗಂಡಃ ರಾಮನಾಯ್ಕ

ಉದ್ಯೋಗಃ ಪಿ.ಎಸ್.ಐ . ಚನ್ನಗಿರಿ ಪೋಲೀಸ್ ಠಾಣೆ

ವಾಸ ಸ್ಥಳಃ ಚನ್ನಗಿರಿ

ಸಾಕ್ಷಿಗೆ ದಿನಾಂಕಃ 14-11-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಸಅಅರವರಿಂದ ಮುಖ್ಯ ವಿಚಾರಣೆ**

2020 ರಿಂದ 2022 ರವರೆಗೆ ರವರೆಗೆ ಪಿ.ಎಸ್.ಐ ಆಗಿ ಚನ್ನಗಿರಿ ಪೊಲಿಸ್ ಠಾಣೆಯಲ್ಲಿ ಕತರ್ವ್ಯನಿರ್ವಹಿಸಿರುತ್ತೇನೆ.

ಚಾಸಾ 6 ಮತ್ತು 7 ರವರ ಹೇಳಿಕೆಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ .

ದಿಃ 01-12-2020 ರಂದು ರಾತ್ರಿ 8-30 ಗಂಟೆ ಸಮಯದಲ್ಲಿ ಅಪರಾಧ ವಿಭಾಗದ ಸಿಬ್ಬಂದಿಯಾದ ಚಾಸಾ 10, 11 ಮತ್ತು 15 ರವರೊಂದಿಗೆ ತಾವರಕೆರೆ ಗ್ರಾಮದ ಕ್ರಾಸ್ ಬಳಿ ವಾಹನಗಳನ್ನು ತಪಾಸಣೆ ಮಾಡುತ್ತಿರುವಾಗ ಅದೇ ಸಮಯಕ್ಕೆ ಚನ್ನಗಿರಿ ಕಡೆಯಿಂದ ಒಂದು ಬೈಕ್ ಬಂದಿದ್ದು, ಸದರಿ ಬೈಕ್ ಚಾಲಕನು ನಮ್ಮನ್ನು ನೋಡಿ ಬೈಕನ್ನು ನಿಲ್ಲಿಸದೇ ಸಂತೆಬೆನ್ನೂರು ಕಡೆ ಜೋರಾಗಿ ಹೋಗುತ್ತಿರುವಾಗ ನಮಗೆ ಅವರ ಮೇಲೆ ಅನುಮಾನ ಬಂದಿದ್ದರಿಂದ ಕೂಡಲೇ ಚಾಸಾ 21 ರವರಿಗೆ ಮಾಹಿತಿಯನ್ನು ತಿಳಿಸಿ ಇಲಾಖಾ ಜೀಪಿನಲ್ಲಿ ಬೈಕ್ ಸವಾರನನ್ನು ಬೆನ್ನತ್ತಿ ಹೋಗಿ ಸಂತೆಬೆನ್ನೂರು ಗ್ರಾಮದ ದಾವಣಗೆರೆ ರಸ್ತೆಯಲ್ಲಿರುವ ಚಾಸಾ 21 ರವರು ಅವರ ಸಿಬ್ಬಂದಿಯೊಂದಿಗೆ ರಸ್ತೆಗೆ ಅಡ್ಡಲಾಗಿ ಬ್ಯಾರಿಕೇಡ್ ಗಳನ್ನು ಹಾಕಿ ಬೈಕ್ ಸವಾರನನ್ನು ಹಿಡಿದುಕೊಂಡಿರುತ್ತಾರೆ. ಸ್ಥಳಕ್ಕೆ ಪಂಚರಾದ ಚಾಸಾ 4 ಮತ್ತು 5 ರವರನ್ನು ಬರಮಾಡಿಕೊಂಡು ನಮ್ಮ ಸಮಕ್ಷಮ ಅವರ ಹೆಸರು ವಿಳಾಸ ವಿಚಾರಿಸಲಾರಿ ನನ್ನ ಹೆಸರು ಚಾಂದ್ ಪೀರ್ ಯಾನೆ ಮಹಮದ್ ಯುನಿಸ್ ಯಾನೆ ಚಾಂದ್ ಬಿನ್ ಮಹಮದ್ ಸೈಫುಲ್ಲಾ, 25 ವರ್ಷ, ಕೂಲಿ ಕೆಲಸ, ವಡ್ನಾಳ್ ರಾಜಣ್ಣ ಬಡಾವಣೆ ಎಂದು ತಿಳಿಸಿರುತ್ತಾರೆ.

ಅವನ ವಶದಲ್ಲಿದ್ದ ಬೈಕನ್ನು ಬೀದಿ ವಿದ್ಯುತ್ ದೀಪದ ಬೆಳಕಿನಲ್ಲಿ ನೋಂದಣಿ ಸಂಖ್ಯೆ ಇಲ್ಲದ ಕಪ್ಪು ಬಣ್ಣದ ಪಲ್ಸಾರ್ ಬೈಕ್ ಇದನ್ನು ಪರಿಶೀಲಿಸಿ ನೋಡಲಾಗಿ ಚಾಸ್ಸಿ ನಂಃ ಎಂಡಿ02ಎ11ಸಿವೈ 6ಕೆಡಬ್ಲ್ಯು ಎಲ್ 14215 ಮತ್ತು ಇಂಜಿನ್ ನಂಃ DHYWHL16482 ಆಗಿರುತ್ತದೆ. ಇದರ ಅಂದಾಜು ಬೆಲೆ ರೂ.80,000/- ಆಗಬಹುದು.

ದಿಃ 30-11-2020 ರಂದು ರಾತ್ರಿ ವೇಳೆಯಲ್ಲಿ ಹೆಬ್ಬಳಗೆರೆ ಗ್ರಾಮದಲ್ಲಿ ಕಳ್ಳತನ ಮಾಡಿದ್ದುಎಂದು ತಿಳಿಸಿದ್ದು, ಈ ಬೈಕ್ ನಮ್ಮ ಪೊ.ಠಾಣೆ ಗುನ್ನೆ ಸಂಃ 370/2020 ರ ನೇದ್ದಕ್ಕೆ ಸಂಬಂಧಿಸಿದ್ದಾಗಿರುತ್ತದೆ ಎಂದು ಗುರುತಿಸಿರುತ್ತೇವೆ.

ನಂತರ ಆರೋಪಿಯು ಬೈಕ್ ನ ಸೈಡ್ ಬ್ಯಾಗ್ ನಲ್ಲಿ ಒಂದು ನೀಲಿ ಕವರನ್ನು ತೆಗೆದು ಅದರಲ್ಲಿದ್ದ ಬೆಳ್ಳಿ ಬಂಗಾರದ ಆಭರಣಗಳನ್ನು ಹಾಜರುಪಡಿಸಿದ್ದನ್ನು ಸ್ಥಳದಲ್ಲಿ ಹಾಜರಿದ್ದ ಚಾಸಾ 21 ರವರು ಒಂದೊಂದಾಗಿ ಪರಿಶೀಲಿಸಿ ನೋಡಲಾಗಿ ಒಂದು ಜೊತೆ ಕಿವಿಯೋಲೆ 2.70 ಗ್ರಾಂ ಇದ್ದು ಹಾಗೂ ಅದರ ಬೆಲೆ ರೂ.11,000/-, ಒಂದು ಜೊತೆ ಬಂಗಾರದ ಜೇಡ 2.80 ಗ್ರಾಂ ಹಾಗೂ ಬೆಲೆ 12,000/- ರೂ , 5 ಚಿಕ್ಕ ಮಕ್ಕಳ ಬಂಗಾರದ ಉಂಗುರಗಳು 3.50 ಗ್ರಾಂ ಹಾಗೂ ಬೆಲೆ 16,000/- ರುಗಳು , ನಂತರ ಒಂದು ಜೊತೆ ಬಂಗಾರದ ಮುತ್ತಿನ ಜುಮುಕಿ ಇದರ ತೂಕ 4.20 ಗ್ರಾಂ ಹಾಗೂ ಬೆಲೆ 17,000/- ರೂಗಳಾಗಿದ್ದವು. ಈ ವಸ್ತುಗಳನ್ನು ರಾತ್ರಿ 9.30 ರಿಂದ 10.15 ರ ವರಗೆ ಪಂಚರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿ ಅಮಾನತ್ತುಪಡಿಸಿಕೂಂಡಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸದರಿ ವಿಚಾರವಾಗಿ ನಾನು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಯನ್ನು ಹಾಗೂ ಮು.ಮಾ.ಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಮು.ಮಾ.ಗಳನ್ನು ಚಾಸಾ.1 ರವರು ತಮ್ಮ ಸುಪರ್ದಿಗೆ ಪಡೆದಿರುತ್ತಾರೆ.

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**sd/-**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ**